

# ಅಂದದ ಕಣ್ಣಿಗೆ ಬಣ್ಣದ ರೆಪ್ಪೆ

**ಇದು ಮಿಕ್ಸ್ ಅಂಡ್ ಮ್ಯಾಚ್ ಕಾಲ. ಉಡುಪಿಗೆ ತಕ್ಕ ಮ್ಯಾಚಿಂಗ್ ಆ್ಯಕ್ಸೆಸರೀಸ್ ಹಾಕಿಕೊಂಡು ಫ್ಯಾಷನ್ ಮಾಡುವುದು ಇಂದಿನ ಟ್ರೆಂಡ್. ಇದೀಗ ಕಣ್ಣುಗಳ ಅಂದ ಹೆಚ್ಚಿಸಲು ಉಡುಪಿಗೆ ಮ್ಯಾಚ್ ಆಗುವಂಥ ಬಣ್ಣ ಬಣ್ಣದ ಕಣ್ಣರೆಪ್ಪೆಗಳು ಲಭ್ಯವಿದ್ದು ಸೌಂದರ್ಯಪ್ರಿಯರ ಮನತಣಿಸುವಂತಿವೆ.**

**■ ಪವಿತ್ರಾ ರಾಘವೇಂದ್ರ ಶೆಟ್ಟಿ**

ಸೌಂದರ್ಯ ಕಣ್ಣುಗಳಲ್ಲಿ ಅಡಗಿದೆ ಎನ್ನುತ್ತಾರೆ ಸೌಂದರ್ಯತಜ್ಞೆಯರು. ಬಟ್ಟಲು ಕಣ್ಣು, ಕಮಲದಂಥ ಕಣ್ಣು, ದುಂಡುಗಣ್ಣು... ಹೀಗೆ ಕಣ್ಣಿನ ಕುರಿತಾಗಿಯೇ ಒಂದಷ್ಟು ರೂಪಕಗಳು, ಹೊಗಳಿಕೆಗಳು ನಾವೆಲ್ಲಾ ಕೇಳಿರುತ್ತೇವೆ. ಕಣ್ಣು ಮನಸ್ಸಿನ ಕನ್ನಡಿ ಎನ್ನಬಹುದೇನೋ. ಮನಸ್ಸಿನ ಭಾವನೆಗಳನ್ನೆಲ್ಲಾ ಕಣ್ಣಿನಲ್ಲಿಯೇ ಹರಿಯಬಿಡಬಹುದು. ಕಣ್ಣು ಒಂದು ಸಂವಹನ ಮಾಧ್ಯಮವಾಗಿಯೇ ಕೆಲಸ ಮಾಡುತ್ತದೆ. ನೀಳವಾದ ಕಣ್ರೆಪ್ಪೆ ಇದ್ದರೆ ತುಂಬಾ ಸುಂದರವಾಗಿ ಕಾಣಬಹುದು ಎಂದು ಆಸೆ ಎಲ್ಲ ಹೆಣ್ಣಮಕ್ಕಳಿಗೂ ಇರುತ್ತದೆ.

ಕೆಲವೊಮ್ಮೆ ವಂಶವಾಹಿಯ ಪ್ರಕಾರವೋ ಅಥವಾ ನಮ್ಮ ದೇಹಗುಣದ ಕಾರಣದಿಂದಲೂ ಎಲ್ಲರಿಗೂ ನೀಳವಾದ ರಪ್ಪೆಯ ಕೂದಲು ಇರುವುದಿಲ್ಲ.. ಅವರವರ ದೇಹ ಗುಣಕ್ಕೆ ತಕ್ಕ ಹಾಗೇ ಹುಬ್ಬಿನ ಕೂದಲು, ಕಣ್ಣಿನ ರಪ್ಪೆಗಳು ಇರುತ್ತವೆ. ದಪ್ಪ ಕಣ್ರೆಪ್ಪೆ ಬೇಕೆಂದರೆ ಹೀಗೆ ಮಾಡಿ, ಹಾಗೇ ಮಾಡಿ ಎಂಬ ಒಂದಷ್ಟು ಟಿಪ್ಸ್ ಇದ್ದರೂ, ಅವನ್ನೆಲ್ಲಾ ಪಾಲಿಸುತ್ತಾ ಕುಳಿತುಕೊಳ್ಳುವುದಕ್ಕೆ ಈಗ ಯಾರಿಗೂ ಸಮಯವಿಲ್ಲ.

ಉಡುಪಿಗೆ ತಕ್ಕಂತೆ ಮೇಕಪ್ ಮಾಡಿಕೊಳ್ಳುವ ಈ ಸಮಯದಲ್ಲಿ ಕಣ್ರೆಪ್ಪೆಯ (ಐ ಲ್ಯಾಶಸ್) ಮೇಕಪ್ ಕೂಡ ಇದಕ್ಕೆ ಹೊರತಾಗಿಲ್ಲ. ನಾನಾ ವಿನ್ಯಾಸದ ಕಣ್ರೆಪ್ಪೆಗಳು ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ. ಇಂತಹವರು ಸಭೆ ಸಮಾರಂಭಗಳಿಗೆ ಹೋಗುವಾಗ ಕೃತಕ ಕಣ್ರೆಪ್ಪೆ ಹಾಕಿಕೊಂಡು ಮಿಂಚಬಹುದುಉಡುಪಿಗೆ ತಕ್ಕ ಮ್ಯಾಚಿಂಗ್ ಕಣ್ರೆಪ್ಪೆಗಳು ಹೆಣ್ಣುಮಕ್ಕಳ ಕಣ್ಣುಗಳನ್ನು ಅಲಂಕರಿಸುತ್ತಿವೆ. ಕಪ್ಪು ಬಣ್ಣದಿಂದ ಹಿಡಿದು ಕಲರ್ ಕಲರ್ ಕಣ್ರೆಪ್ಪೆ ಈಗಿನ ಟ್ರೆಂಡ್ ಆಗಿದೆ. ಕಪ್ಪೆ ಚೆಂದವೆನ್ನುತ್ತಿದ್ದ ಕಾಲವೀಗ ಇಲ್ಲ. ಎಲ್ಲದರಲ್ಲೂ ಡಿಫರೆಂಟ್ ಬೇಕು ಅನ್ನುವವರಿಗೆ ಕಣ್ಣಿನ ಬಣ್ಣಕ್ಕೆ ಹೊಂದುವಂಥ ಕಲರ್ ಫುಲ್ ಮಸ್ಕರಾ ಕೂಡ ಮಾರುಕಟ್ಟೆಯಲ್ಲಿದೆ.

## ಯಾವ ಕಣ್ಣಿಗೆ ಯಾವ ರೆಪ್ಪೆ..?

ಮೊದಲೆಲ್ಲಾ ಒಂದೇ ಬಗೆಯ ಕಣ್ಣಿನ ರಪ್ಪೆಗಳು ಸಿಗುತ್ತಿದ್ದವು. ಈಗ ಕಾಲಕ್ಕೆ ತಕ್ಕಂತೆ ಫ್ಯಾಷನ್ ಬದಲಾಗಿದೆ. ವಿವಿಧ ವಿನ್ಯಾಸ ವಿವಿಧ ಬಣ್ಣದ ಕಣ್ಣಿನ ರಪ್ಪೆಗಳು ಕೂಡ ಮಾರುಕಟ್ಟೆಯಲ್ಲಿವೆ. ನಿಮ್ಮ ಉಡುಪಿಗೆ ತಕ್ಕ ಹಾಗೇ ಬಣ್ಣ ಬಣ್ಣದ ರೆಪ್ಪೆಗಳು ಸಿಗುತ್ತವೆ. ಸಹಜವಾಗಿ ಕಾಣಿಸುವಂತಹ ಕಣ್ರಪ್ಪೆ, ದಟ್ಟವಾದ ಕಣ್ರೆಪ್ಪೆ, ಜಿಗ್ ಜ್ಯಾಗ್ ಮಾದರಿಯ ರಪ್ಪೆಗಳು, ಮಿಂಕ್ , ಪ್ಲಾಸ್ಟಿಕ್, ಮನುಷ್ಯನ ಕೂದಲಿನಂತೆ ಕಾಣಿಸುವ ಕಣ್ಣಿನ ರೆಪ್ಪೆಗಳು. ಮಾರುಕಟ್ಟೆಯಲ್ಲಿವೆ. ಇದನ್ನೆಲ್ಲಾ ಬಳಸಿಕೊಂಡು ಕಣ್ಣಿನ ಸೌಂದರ್ಯವನ್ನು ಮತ್ತಷ್ಟೂ ಹೆಚ್ಚಿಸಬಹುದು.

ಇದರಲ್ಲಿ ಮಿಂಕ್ ಬಹಳ ಬೆಲೆಬಾಳುವಂತಹ ಐ ಲ್ಯಾಶಸ್ ಆಗಿದೆ. ನಿಮಗೆ ಸಹಜವಾಗಿಯೇ